

ಹೆಂಗಸು ನಿದ್ರಿಸುತ್ತಿದ್ದಳು. ಅವಳ ಗಂಡ ನನ್ನನ್ನು ನೋಡಿ ಹಲ್ಲು ಕಿರಿದ. ನಾನೂ ಮೆಲ್ಲಗೆ ನಕ್ಕೆ. 'ಮುಳಿಚಿದಾ?(ಎಚ್ಚರ ಆಯ್ತಾ?)' ಅಂದ. ಅವನ ಧ್ವನಿಗೆ ಅವನ ಹೆಂಡತಿ ಕಣ್ಣುಬಿಟ್ಟಳು. ಅವನನ್ನೊಮ್ಮೆ ದುರುಗುಟ್ಟಿ ನೋಡಿ 'ಎನ್ನ ಪೇಚ್?' ಎಂದು ಗದರಿದಳು. ನನ್ನನ್ನೂ ದುರು ದುರು ನೋಡಿದಳು. ನಾನು ಮತ್ತೆ ಕಣ್ಣು ಮುಚ್ಚಿ ಕುಳಿತೆ. ಅವನು ಕಿಟಕಿಯಿಂದ ಹೊರಗೆ ನೋಡತೊಡಗಿದ್ದ.

ಆ ಬಿಳಿಗಡ್ಡದ ಮುದುಕ ನನ್ನನ್ನು ಎಲ್ಲಿಗೆ ಕರೆದೊಯ್ದ ಗೊತ್ತಿಲ್ಲ. ಹೇಗೆ, ಎಷ್ಟುದಿನ... ಒಂದೂ ಗೊತ್ತಿಲ್ಲ. ನನಗೆ ತಿಳಿವು ಬಂದಾಗ ಒಂದು ಪೊಲೀಸ್ ಸ್ಟೇಷನ್‌ನಲ್ಲಿದ್ದೆ. ಮೈಮೇಲೆ ಒಂದು ತುಂಡು ಲಂಗ, ರವಿಕೆ ಬಿಟ್ಟರೆ ಬೇರೇನೂ ಇಲ್ಲ. ನನ್ನ ಸರ, ಬಳೆ, ಗೆಜ್ಜೆ, ಜುಮುಕಿ... ಯಾವುದೂ ಇಲ್ಲ. ಆಶ್ಚರ್ಯ ಅಂದರೆ ನಾನು ಅಳಲೂ ಇಲ್ಲ. ಆ ಪೊಲೀಸಿನವನ ಭಾಷೆ ನನಗೆ ಅರ್ಥವೇ ಆಗಲಿಲ್ಲ. ಕೊನೆಗೆ ಮಾತೇ ಬರದವಳಂತೆ ಇದ್ದುಬಿಟ್ಟೆ. ಯಾರ ಯಾರದೋ ಮನೆಯಲ್ಲಿ ಕೆಲಸಕ್ಕೆಂದು ಹೋಗುತ್ತಿದ್ದೆ. ಎಲ್ಲ ಕೆಲಸಗಳಿಗೂ ನಾನು ಆಳು ಆಗಿಬಿಟ್ಟೆ. ನೃತ್ಯ ಮರೆತೆ, ಸಂಗೀತ ಮರೆತೆ, ಅಮ್ಮಅಪ್ಪ, ಪೊನ್ನಿ... ಯಾರೂ ನನ್ನ ನೆನಪಿಗೆ ಬರಲೇ ಇಲ್ಲ.